- 14 -

## ಸಭಾಪಂಗಡವಲ್ಲದ ಕ್ರೈಸ್ತತ್ವ -

# ಬಾಪ್ತಿಸ್ಮ ಏನಾಗಿದೆ?

ಈ ಅಧಯ್ಯನದ ಉದ್ದೇಶವು ಪ್ರತಿಯೊಬ್ಬ ಯಥಾರ್ಥ ಮನುಷ್ಯನನ್ನು ವಿಶ್ವಾಸಿಗಳಲ್ಲಿಯ ಪಂಗಡಗಳು ತಪ್ಪಾದವುಗಳು ಮತ್ತು ಕ್ರಿಸ್ತನ ಮುಖಾಂತರ ನಮ್ಮ ತಂದೆಯ ಚಿತ್ತಕ್ಕೆ ಅವು ವಿರೋಧವಾದವುಗಳು, ಹಾಗೂ ಕ್ರಿಸ್ತನು ಮತ್ತು ಆತನ ಅಪೊಸ್ತಲರು ವಿಶ್ವಾಸಿಗಳ ಏಕತೆಗಾಗಿ ಪ್ರಾರ್ಥಿಸಿದರು ಮತ್ತು ಕಾರ್ಯಮಾಡಿದರು ಎಂಬುದನ್ನು ನೋಡಲು ನಡಿಸುವಂಥದ್ದಾಗಿರುತ್ತದೆ. ಕ್ರೈಸ್ತನಾಗಿರಲು - ಕ್ರಿಸ್ತನಂತಿರಲು - ಪ್ರತಿಯೊಬ್ಬ ಕ್ರೈಸ್ತನು ಈ ಪಂಗಡಗಳನ್ನು ಖಂಡಿಸತಕ್ಕದ್ದು ಹಾಗೂ ಸಮಾಧಾನದ ಬಂಧನದಲ್ಲಿ ಆತ್ಮನ ಐಕ್ಯತೆಯನ್ನು ಕಾಪಾಡಿಕೊಳ್ಳಲು ಯಾಥಾರ್ಥವಾಗಿ ಹೋರಾಡತಕ್ಕದ್ದು (ನೋಡಿರಿ ಯೋಹಾನ 17:20, 21; ಅಪೊಸ್ತಲರ ಕೃತ್ಯಗಳು 4:32; 1 ಕೊರಿಂಥ 1:10-13; ಎಫೆಸ 4:1-6).

ಹೃದಯದಲ್ಲಿ ನಂಬಿಗಸ್ತಿಕೆಯುಳ್ಳವರೂ ನಿಷ್ಠೆಯುಳ್ಳವರೂ ಆದವರು ಈ ವಿಭಜನೆಗಳಿಗೆ ಸಭಾಪಂಗಡತ್ವವು ಮೂಲವಾದದ್ದೆಂದು ಅರ್ಥಮಾಡಿಕೊಳ್ಳತಕ್ಕದ್ದು. ಒಂದು ಸಭಾಪಂಗಡಕ್ಕೆ ಸೇರಿಕೊಂಡಿರುವದೆಂದರೆ ಅದಕ್ಕೆ ಬೆಂಬಲಕೊಡುವಂಥದ್ದಾಗಿರುತ್ತದೆ; ಬೈಬಲಿನ ಸರಳವಾದ ಬೋಧನೆಗೆ ವಿರುದ್ಧವಾಗಿ ತನ್ನ ಜೀವಿತವನ್ನು ನೇರವಾಗಿ ಇಟ್ಟುಕೊಳ್ಳದೆ ಒಬ್ಬನು ಒಂದು ಸಭಾಪಂಗಡದ ಸದಸ್ಯನಾಗಿರಲಾರನು. ವಿಶ್ವಾಸಿಗಳ ಮಧ್ಯದಲ್ಲಿಯ ಭೇದಗಳ ದುಷ್ಟತ್ವವನ್ನು ಸದಾಕಾಲಕ್ಕೂ ತೆಗೆದು ಹಾಕಿದರೆ, ನಾವು ಭೂಲೋಕದಿಂದ ಎಲ್ಲಾ ಸಭಾಪಂಗಡತ್ವವನ್ನು ತೆಗೆದು ಹಾಕಿ ಬಿಡುವೆವು.

ದೇವರ ವಾಕ್ಯಕ್ಕೆ ನಿರ್ದಿಷ್ಟವಾಗಿ ಅಂಟಿಕೊಂಡಿರುವುದು ಸಭಾಪಂಗಡತ್ವದ ಪ್ರತಿಯೊಂದು ತತ್ವವನ್ನು ಇಂದಿನ ಬೋಧನೆಯಿಂದ ತೆಗೆದು ಹಾಕುವುದು ಮತ್ತು ಅಳಿಸಿಬಿಡುವುದು. ತನ್ನ ಧಾರ್ಮಿಕ ಜೀವನದಲ್ಲಿ, ಪರಿಶುದ್ಧಾತ್ಮನಿಂದ ಮಾತ್ರವೇ ನಡಿಸಲ್ಪಡುವವನು ಕೇವಲ ಒಬ್ಬ ಕ್ರೈಸ್ತನಾಗಿರುವನು, ಕರ್ತನ ಶಿಷ್ಯನಾಗಿರುವನು, ದೇವರ ಮಗುವಾಗಿರುವನು. ನೂರಾರು ವರ್ಷಗಳಿಂದ - ಯೇಸುವು, ಅಪೊಸ್ತಲರು, ಇತರ ನೂರಾರು ಪ್ರೇರೇಪಿತ ಜನರು ಜೀವಿಸಿದ ನೂರು ವರ್ಷಗಳನ್ನೊಳಗೊಂಡು - ಕ್ರಿಸ್ತನಲ್ಲಿಯ ಯಾವುದೇ ವಿಶ್ವಾಸಿಯು ಮೇಲೆ ಹೇಳಿದ ಅಂಕಿತಗಳಂಥ ಹೆಸರುಗಳನ್ನು ಬಿಟ್ಟು ಬೇರೆ ಹೆಸರುಗಳಿಂದ ತಿಳಿಯಲ್ಪಟ್ಟಿರುವದಿಲ್ಲ. ಹಾಗಾದರೆ ಸಭಾಪಂಗಡತ್ವವು ಎಲ್ಲಿ ಉಗಮವಾಯಿತು? ದೇವರ ಪರಿಶುದ್ಧ ಜನರು ಯಾವ ಸಭೆಯಲ್ಲಿ ಜನರನ್ನು ನಡಿಸಿದರು? ಪ್ರೇರೇಪಣೆಯ ದಿನಗಳಲ್ಲಿ ಕ್ರೈಸ್ತರು ಯಾವ ಸಭೆಯಲ್ಲಿ ಜೀವಿಸಿದರು, ಕೆಲಸ ಮಾಡಿದರು ಮತ್ತು ಆರಾಧಿಸಿದರು? ಯಾವುದೇ ಸಭಾಪಂಗಡದ ಸಭೆಗಳು ಅಸ್ತಿತ್ವದಲ್ಲಿದ್ದವೆಂದು ಯಾರೂ ಹೇಳುವದಿಲ್ಲ. ಇಡೀ ಹೊಸ ಒಡಂಬಡಿಕೆಯ ಚರಿತ್ರೆಗನುಗುಣವಾಗಿ, ಆಗ ಕೇವಲ ದೇವರ ಸಭೆಗಳು, ಕ್ರಿಸ್ತನ ಸಭೆಗಳು ಮಾತ್ರ ಅಸ್ತಿತ್ವದಲ್ಲಿದ್ದವೆಂದು ನಿಶ್ಚಿತವಾಗಿ ಹೇಳಬಹುದು. ಇವುಗಳಿಗೆ ಮಾತ್ರವೇ ಪರಿಶುದ್ಧಾತ್ಮನು ಬರೆದನು. ಇಡೀ ಹೊಸ ಒಡಂಬಡಿಕೆಯಲ್ಲಿ ಯಾವುದೇ

ಒಂದು ಸಭಾಪಂಗಡದ ಸಭೆಗೆ ಒಂದು ಸಾಲು ನಿರ್ದೇಶನವು ಕೊಡಲ್ಪಟ್ಟಿರುವದಿಲ್ಲ. ನಿಶ್ಚಯವಾಗಿಯೂ, ಪರಿಶುದ್ಧಾತ್ಮನು ಅಸ್ತಿತ್ವದಲ್ಲಿ ಇಲ್ಲದ ಯಾವುದನ್ನೂ ಬರೆಯಲಿಲ್ಲ. ಒಬ್ಬನು ಯಾವುದೇ ಸಭಾಪಂಗಡಕ್ಕೆ ನಿರ್ದೇಶನಗಳನ್ನು ಸುಲಭವಾಗಿ ಕೊಂಡುಕೊಳ್ಳು ವಂತೆ ಮ್ಯಾಸೋನಿಕ್ ಲಾಡ್ಜ್, ವುಡ್‌ಮೆನ್ ಆಫ್ ವರ್ಲ್ಡ್ ಇಲ್ಲವೇ ಯುನೈಟೆಡ್ ಸ್ಟೇಟ್ಸ್ ಸರಕಾರಕ್ಕೆ ಹೊಸ ಒಡಂಬಡಿಕೆಯಲ್ಲಿ ನಿರ್ದೇಶನಗಳನ್ನು ಕಂಡು ಕೊಳ್ಳಬಹುದು.

ನಿರಾಕರಿಸಲಾಗದ ತರ್ಕದಿಂದ, ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟಂಥ ಪರಿಶುದ್ಧಾತ್ಮನ ಬೋಧನೆಯನ್ನು ನಂಬಿಗಸ್ತಿಕೆಯಿಂದ ಕೈಕೊಳ್ಳುವವನು ಮಾತ್ರ ಕ್ರೈಸ್ತನಾಗಿದ್ದಾನೆಂದು ಹೇಳಬಹುದು. ತಮ್ಮ ಬೋಧನೆಗಳಲ್ಲಿ ಮತ್ತು ತಮ್ಮ ಜೀವಿ ತಗಳಲ್ಲಿ ಬೈಬಲಿನ ಸತ್ಯವನ್ನು ಅನುಸರಿಸುವುದು ಅವರನ್ನು ದೇವರ ಸಭೆಯ ಸದಸ್ಯರನ್ನಾಗಿ ಅಲ್ಲದೆ ಬೇರೇನನ್ನಾಗಿಯೂ ಮಾತಾಡುವದಿಲ್ಲ. ಯಾರೂ ಇದನ್ನು ಅಲ್ಲಗಳೆಯಲಾರರು.

ನಾವು - ಒಂದೇ ರೀತಿಯಲ್ಲಿ "ನೋಡಬೇಕು" ಎಂಬುದನ್ನು ತೋರಿಸಲು ಈ ಅಧ್ಯಯನದಲ್ಲಿ ಒಂದು ನಂಬಿಗಸ್ತ ಪ್ರಯತ್ನವು ಮಾಡಲ್ಪಟ್ಟಿದೆ. ಕೊನೆಯ ಪಕ್ಷ ಪ್ರಥಮ ಶತಮಾನದಲ್ಲಿ ದೇವರ ತೋಟದಲ್ಲಿ ನೆಡಲ್ಪಟ್ಟ ಐಕ್ಯತೆಯ ಸುಂದರವಾದ ಹೂವು ಇಪ್ಪತ್ತೊಂದನೆಯ ಶತಮಾನದಲ್ಲಿ ಕೆಡಿಸಲ್ಪಡದೇ ಮತ್ತು ತೊಂದರೆಗೀಡು ಆಗದೇ ಬೆಳೆಯುವದನ್ನು ನಾವು ನೋಡುವಂತೆ ಆಗಲಿ. ಈ ಶತಮಾನದಲ್ಲಿ ಜೀವಿಸುತ್ತಿರುವ ವಿಶ್ವಾಸಿಗಳು ಮೊದಲನೆಯ ಶತಮಾನದಲ್ಲಿ ಶಿಷ್ಯರು ಇದ್ದಂತೆ ಒಂದೇ ಹೃದಯವು ಳ್ಳವರೂ ಒಂದೇ ಆತ್ಮವುಳ್ಳವರೂ ಆಗಿರಲಿ. ಪರಿಶುದ್ಧಾತ್ಮನ ಬೋಧನೆಯು, ಸಭಾಪಂಗಡತ್ವಕ್ಕೆ ಪ್ರೀತಿ ಮತ್ತು ಭಕ್ತಿಯನ್ನೂ ಬಿಟ್ಟು ಆತನ ನಡಿಸುವಿಕೆಯ ಮೇಲೆ ಮಾರ್ಗದರ್ಶನಕ್ಕಾಗಿ ನೆವವಿಲ್ಲದಷ್ಟು ಸರಳವಾದದ್ದಾಗಿದೆ.

ಅಪೊಸ್ತಲರು ಮಾರ್ಗದರ್ಶನ ಮಾಡುವ ಬಲಕ್ಕಾಗಿ "ಕಾದುಕೊಂಡಿದ್ದ" ನಂತರ ಕೂಡಿಬಂದ ಪ್ರಥಮ ಕೂಟದ ನಮ್ಮ ಪರೀಕ್ಷೆಯ ನಂತರ, ನಿಜವಾದ ಹೃದಯಗಳು ವಿಭಜನೆಗೊಂಡ ಬೋಧನೆಯ ಎರಡು ಅಂಶಗಳನ್ನು ನಾವು ಕಂಡುಕೊಂಡಿದ್ದೇವೆ. ಹೀಗಿ ದ್ದರೂ ಪೇತ್ರನ ಭಾಷೆಯ ಸಂಪೂರ್ಣ ಪರೀಕ್ಷೆಯಿಂದ, ಮಾರ್ಗದಲ್ಲಿ ಮೊದಲನೆಯ "ತಿರುವಿನಲ್ಲಿ" ನಿಜವಾದ ಹೃದಯಗಳ ವಿಭಜನೆಗಾಗಿ ಪರಿಶುದ್ಧ ಬರಹದ ಯಾವುದೇ ಕಾರಣವಿರುವದಿಲ್ಲವೆಂಬುದು ತೋರಿಸಲ್ಪಟ್ಟಿದೆ. ಪೇತ್ರನ ಭಾಷೆಗೆ ಅದರ ಸಾಮಾನ್ಯವಾದ ಮತ್ತು ಸ್ಪಷ್ಟವಾದ ಅರ್ಥವಿರುವಂತೆ ಬಿಡುವುದು, ಅಲ್ಲಿ ಮಾಡಲ್ಪಟ್ಟ ದುಷ್ಟ ವಿಭಜನೆಯನ್ನು ನಾಶಪಡಿಸುವುದು ಮತ್ತು ಯಾವುದೇ ಒಂದು ಸತ್ಯವನ್ನು ತ್ಯಾಗಮಾಡದೇ ಕ್ರಿಸ್ತನಲ್ಲಿ ಪ್ರತಿಯೊಂದು ಹೃದಯವನ್ನು ಒಂದುಗೂಡಿಸುವುದೂ ಜಗತ್ತಿನ ಪಾಂಡಿತ್ಯವು ನ್ಯಾಯಧೀಶನಂತೆ ಸೇವೆ ಮಾಡುವುದು, ಈ ಅತೀ ಸಾಧಾರಣ ವಾದ ವ್ಯಾಖ್ಯಾನವು ಅತ್ಯುತ್ತಮವಾದದ್ದೆಂದು ಒಪ್ಪಿಕೊಳ್ಳುವುದು.[1] ಈ ಹಂತದಲ್ಲಿ, ಕ್ರಿಸ್ತನಲ್ಲಿ ಏಕತೆಯು ಸ್ಥಾಪಿಸಲ್ಪಡುವಂತೆ ಎಷ್ಟು ಜನರು ದೇವರ ಬೋಧನೆಯನ್ನು ಇಟ್ಟು ಎಲ್ಲವನ್ನು ಬಿಟ್ಟು ಕೊಡಲು ಸಿದ್ಧರಾಗಿರುವರೆಂಬುದನ್ನು ನೋಡುವುದು ಮಾತ್ರ ಉಳಿದುಕೊಂಡಿರುತ್ತದೆ.

ಹಿಂದಿನ ಪಾಠದಲ್ಲಿ, ಮಾರ್ಗದಲ್ಲಿಯ ಎರಡನೆಯ "ಕವಲೊಡೆಯುವಿಕೆಯನ್ನು" ಪರೀಕ್ಷಿಸುತ್ತಿದ್ದೆವು. ಈ "ಕವಲೊಡೆಯುವಿಕೆಯು" ಬಾಪ್ತಿಸ್ಮದ ಕಾರ್ಯದ ಮೇಲೆ ಮಾಡಲ್ಪಟ್ಟಿತು. ಜಗತ್ತಿನಲ್ಲಿ ಯೇಸುವಿನಲ್ಲಿ ನಂಬಿಕೆಯಿಡುವ ಒಳ್ಳೆಯ, ನಿಜವಾದ ಹೃದಯಗಳು ಇರುವವು, ಆ ನಂಬಿಕೆಯ ಮುಖಾಂತರ, ಅವರು ಭಕ್ತಿಯುಳ್ಳ ದುಃಖಕ್ಕೆ ತರಲ್ಪಟ್ಟಿರುವರು; ಮತ್ತು ಹೃದಯದ ಆಳವಾದ ಪಶ್ಚಾತ್ತಾಪದ ಮುಖಾಂತರ, ಅವರು

ಪಾಪದ ಜೀವಿತವನ್ನು ತಿರಸ್ಕರಿಸಲು ತೀರ್ಮಾನಿಸಿದರು (ಮಾನಸಾಂತರ ಪಟ್ಟರು), ಮತ್ತು ನೀತಿಯ ಜೀವಿತ ಜೀವಿಸಲು ನಿರ್ಧರಿಸಿಕೊಂಡರು. ಹೀಗಿದ್ದರೂ, ಪರಿಶುದ್ಧ ಬರಹದ್ದಲ್ಲದ ಬೋಧನೆಯಿಂದ ಬಾಪ್ತಿಸ್ಮಕ್ಕಾಗಿ ಅವರು "ಚಿಮುಕಿಸುವಿಕೆಯನ್ನು" ಇಲ್ಲವೇ "ಸುರಿಯುವಿಕೆಯನ್ನು" ಸ್ವೀಕರಿಸಿದರು. ಹೀಗೆ ಅವರು ಒಬ್ಬನು ಬಾಪ್ತಿಸ್ಮ ಹೊಂದುವ ಅವಶ್ಯಕತೆಯ ನಮ್ಮ ಕರ್ತನ ಆಜ್ಞೆಯನ್ನು ಪೂರ್ತಿಗೊಳಿಸುವದರಲ್ಲಿ ಸೋತು ಹೋಗಿದ್ದಾರೆ ಎಂದು ನಮ್ಮಲ್ಲಿ ಅನೇಕರು ನಂಬುತ್ತೇವೆ. ಈ ಹೃದಯಗಳ ಯಾಥಾರ್ಥತೆಯನ್ನು ಪ್ರಶ್ನಿಸುವುದು ನನ್ನಿಂದ ದೂರ ಇರಲಿ. ನನ್ನ ಸ್ವಂತ ಹೃದಯಕ್ಕಾಗಿ ನಾನು ಕೇಳುವ ಪ್ರಮಾಣಿಕತೆಯನ್ನೇ ಅವರಿಗೂ ಅದೇ ಪ್ರಾಮಾಣಿಕತೆಯನ್ನೇ ಕೊಡುತ್ತೇನೆ; ಆದರೆ ಯಥಾರ್ಥ ಹೃದಯಗಳು, ಒಳ್ಳೆಯ ಹೃದಯಗಳು, ಅಷ್ಟೇ ಯಥಾರ್ಥವಾದ ಹೃದಯಗಳು ಜೀವಿಸಿವೆ ಮತ್ತು ತಪ್ಪಾಗಿವೆ, ತಪ್ಪು ಮಾಡಿವೆ ಎಂಬುದನ್ನು ಒಪ್ಪಿಕೊಳ್ಳತಕ್ಕದ್ದು. ಎಲ್ಲರೂ ಒಂದಾಗಿರಬೇಕೆಂದು ಯೇಸುವು ನಮಗಾಗಿ ಆಸಕ್ತಿಯಿಂದ ಬೇಡಿಕೊಳ್ಳುವದರಿಂದ, ಮತ್ತು ಬಾಪ್ತಿಸ್ಮವು ಏನಾಗಿರುವದೆಂಬುದನ್ನು ಕುರಿತು ಹೀಗೆ ಒಪ್ಪಿಕೊಳ್ಳದೇ ನಾವು ಎಂದೂ ಒಂದಾಗಲಾರೆವೆಂಬುದರಿಂದ, ಜವಾಬ್ದಾರಿಕೆಯಿಂದ, ಪ್ರಾಮಾಣಿಕತೆಯಿಂದ ಮತ್ತು ಯೋಗ್ಯವಾಗಿ ವಿಷಯದ ಮೇಲೆ ದೇವರು ಹೇಳಿದ್ದೆಲ್ಲವನ್ನೂ ಪರೀಕ್ಷಿಸುವುದು ನಮಗೆ ಲಾಭ ತರುವುದು.

ನಮ್ಮ ಪದ "baptize" ಎಂಬುದು ನಮ್ಮ ಕರ್ತನಿಂದ ಉಪಯೋಗಿಸಲ್ಪಟ್ಟ ಗ್ರೀಕ ಪದದ ಆಂಗ್ಲ ರೂಪವೆಂಬ ಸಂಗತಿಯನ್ನು ನಮ್ಮ ಹಿಂದಿನ ಪಾಠದಲ್ಲಿ ಉಲ್ಲೇಖಿಸಿದ್ದೇವೆ. ಅದು ಗ್ರೀಕ ಪದದ ಭಾಷಾಂತರವಾಗಿರುವದಿಲ್ಲ ಆದರೆ ಅದು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ತೆಗೆದುಕೊಂಡು, ಅದರ ರೂಪವನ್ನು ಬದಲಿಸಿ, ರೂಪದಲ್ಲಿ ಮತ್ತು ಉಚ್ಚರಣೆಯಲ್ಲಿ ಇಂಗ್ಲೀಷನ್ನಾಗಿ ಮಾಡಿದ್ದಾಗಿದೆ. ಇಲ್ಲಿ ಯಾವ ವಾದವಿರುವದಿಲ್ಲ. ಪದದ ಅರ್ಥಕ್ಕಾಗಿ ಅದು ನಮ್ಮನ್ನು ಗ್ರೀಕ ಡಿಕ್ಶನರಿಗಳಿಗೆ ಒತ್ತಾಯ ಪೂರ್ವಕವಾಗಿ ಕಳುಹಿಸುತ್ತದೆಂದು ಹಿಂದಿನ ಪಾಠದಲ್ಲಿ ಹೇಳಿದ್ದೇವೆ. ಯೇಸುವು ಅದನ್ನು ಉಪಯೋಗಿಸಿದಾಗ, ಗ್ರೀಕರು ಈ ಪದದಲ್ಲಿ ಕಂಡ ಅದೇ ಚಿತ್ರವನ್ನು ನಾವು ನೋಡತಕ್ಕದ್ದು. ಒಂದು ಹೊಸ ಅರ್ಥದೊಂದಿಗೆ ಯೇಸುವು ಉಪಯೋಗಿಸಿರದಿದ್ದರೆ ಇಂದು ತಾನೇ ಸ್ಪಷ್ಟವಾಗುತ್ತದೆ. ಇದನ್ನು ಯಾರೂ ಹೇಳಿಕೊಳ್ಳುವದಿಲ್ಲ. ಸಂಶೋಧನೆ ಮಾಡಲು ಯಾವನಾದರೂ ಶ್ರಮೆವಹಿಸಿದರೆ, ಗ್ರೀಕ ಭಾಷೆಯ ಎಲ್ಲಾ ಲೆಕ್ಸಿಕೋ ಗ್ರಾಫರರು ಈ ಪದದ ವಿವರಣೆಯಲ್ಲಿ ಹೆಚ್ಚಿನ ಮಟ್ಟಿಗೆ ಒಪ್ಪಿಕೊಳ್ಳುತ್ತಾರೆ, ಇಬ್ಬರು ಯಥಾರ್ಥವಾದವರು ಅವರ ಅರ್ಥವನ್ನು ಒಪ್ಪಿಕೊಳ್ಳುವರು ಎಂದು ತೃಪ್ತಿಪಟ್ಟುಕೊಳ್ಳುವನು ಯಾವುದೇ ಉತ್ತಮಮಟ್ಟದ ಗ್ರೀಕ - ಇಂಗ್ಲೀಷ ಲೆಕ್ಸಿಕೋನ್ (ಡಿಕ್ಶನರಿ)ಯು "ಚಿಮುಕಿಸುವಿಕೆ" ಇಲ್ಲವೇ "ಸುರಿಯುವಿಕೆ" ಎಂದು ಪದದ ಅರ್ಥವನ್ನು ಕೊಟ್ಟಿರುವದಲ್ಲ. ಲಿಡ್ಡೆಲ್ ಮತ್ತು ಸ್ಕೊಟ್ ಅವರು ತಮ್ಮ ಲೆಕ್ಸಿಕೊನ್‌ದ ಒಂದು ಆವೃತ್ತಿಯಲ್ಲಿ "ಮೇಲೆ ಸುರಿಸು" ಎಂದು ಕೊಟ್ಟಿದ್ದಾರೆ; ಆದರೆ ಅವರು ಅದನ್ನು ಪರಿಷ್ಕರಿಸಿದಾಗ, ಅವರು ಈ ಅರ್ಥವನ್ನು ತೆಗೆದು ಹಾಕಿದರು, ಬಿಟ್ಟುಬಿಟ್ಟರು. ಹಾಗೆ ಮಾಡುವಲ್ಲಿ ಅವರೂ ಸಹ, ಯಾವುದೇ ಗ್ರೀಕ ಬರಹಗಾರನು, ನಾವು ತಿಳಿದಿರುವಂತೆ "ಮೇಲೆ ಸುರಿಸು" ಎಂಬ ಅರ್ಥದೊಂದಿಗೆ ಈ ಪದವನ್ನು ಉಪಯೋಗಿಸಿರುವದಿಲ್ಲ ಎಂಬುದಕ್ಕೆ ಸಾಕ್ಷಿಕೊಟ್ಟರು. ನಮ್ಮ ಒಡೆಯನಿಂದ ನಾವು ಬಾಪ್ತಿಸ್ಮ ಹೊಂದಬೇಕೆಂದು ತನ್ನ ಆಜ್ಞೆಯಲ್ಲಿ ಉಪಯೋಗಿಸಿದ ಗ್ರೀಕ ಪದದ ಅರ್ಥವು "ಚಿಮುಕಿಸು" ಇಲ್ಲವೇ "ಸುರಿಸು" ಎಂದಾಗುವದೆಂದು ಯಾವುದೇ ಪಂಡಿತನು ಗಂಡಾಂತರ ತೆಗೆದು ಕೊಂಡು ಬೆಂಬಲಿಸಲಿಲ್ಲ ಎಂದು ಹೇಳುವುದು ಸುರಕ್ಷಿತವಾದದ್ದಾಗಿರುತ್ತದೆ.

ಪದಗಳ ಅರ್ಥಗಳಿಗೆ ಸಂಬಂಧಿಸಿದಂತೆ ಯಾವುದನ್ನಾದರೂ ಪಾಂಡಿತ್ಯವೂ ಬಗೆಹರಿಸುವುದಾದರೆ, ನಮ್ಮ ರಕ್ಷಕನಿಂದ ಉಪಯೋಗಿಸಲ್ಪಟ್ಟ, baptizo (baptize) ಎಂಬ ಪದದ ಅರ್ಥವನ್ನು ಅದು ಬಗೆಹರಿಸುತ್ತದೆ. ಈ ಪಾಂಡಿತ್ಯದ ಪ್ರಕಾರವಾಗಿ, ಹೋಮರನ ಸಮಯದಿಂದ ಮುಂದೆ ಒಂದು ಬದಲಾಗದ ಅರ್ಥ ಈ ಪದಕ್ಕಿದೆ: "ಅದ್ದು, ಮುಳುಗೇಳಿಸು, ಧುಮುಕು, ಮುಳುಗಿಸು, ಮುಳುಗು, ತೊಳೆ" ಎಂಬುದು ಜಗತ್ತಿನ ಪಾಂಡಿತ್ಯದಿಂದ ಕೊಡಲ್ಪಟ್ಟ ಮತ್ತು ಒಪ್ಪಿಕೊಂಡ ಅರ್ಥವಾಗಿದೆ.

ಗ್ರೀಕ ಪದದಂತೆ baptizoದ ಅರ್ಥವಲ್ಲದೆ, ಅದಕ್ಕಾಗಿ ಇಂಗ್ಲೀಷ ಪದವು "baptize" ಎಂಬುದು ಗ್ರೀಕ ಪದಕ್ಕೆ ಗ್ರೀಕ - ಇಂಗ್ಲೀಷ ಲೆಕ್ಸಿಕೊನಗಳು ಕೊಡುವ ಅದೇ ಅರ್ಥವು ಇಂಗ್ಲೀಷ್ ಬರಹಗಾರರಿಂದ ಕೊಡಲ್ಪಟ್ಟಿದೆ, ಧಾರ್ಮಿಕಬರಹಗಳಲ್ಲಿ ಅದರ ಉಪಯೋಗವನ್ನು ಈಗ ಬದಿಗಿಟ್ಟು, ಕೇವಲ ಇಂಗ್ಲೀಷ ದೃಷ್ಟಿಕೋನದಿಂದ ಅದರ ಅಧ್ಯಯನ ಮಾಡೋಣ. "ಪ್ರಾಪಂಚಿಕ" ಇಂಗ್ಲೀಷ್‌ನಲ್ಲಿ ಅದರ ಉಪಯೋಗದಿಂದ ಅದರ ಅರ್ಥವನ್ನು ತೀರ್ಮಾನಿಸೋಣ. ಈ ರೀತಿಯಲ್ಲಿ, ಅದು, "ಮುಳುಗಿಸು, ಮುಣುಗಿಸು, ದುಮುಕು, ಮುಳುಗೇಳಿಸು" ಇಲ್ಲವೇ ಸಮಾನಾರ್ಥ ಕೊಡುವದನ್ನು ಕಂಡು ಕೊಳ್ಳುತ್ತೇವೆ. "ಚಿಮುಕಿಸು" ಇಲ್ಲವೇ "ಸುರಿಸು" ಎಂಬದಕ್ಕೆ ಸಮಾನವಾಗಿ ಅರ್ಥವಿರುವುದರೊಂದಿಗೆ "baptize" ಎಂಬ ಪದವನ್ನು ಉಪಯೋಗಿಸಿದ್ದ ಯಾವ ಪ್ರಾಪಂಚಿಕ ವಾಕ್ಯವನ್ನು ಕಂಡುಕೊಳ್ಳಲಾರೆವು. ಅಂದರೆ ಯಾವುದೇ ಆದರ್ಶ ಇಂಗ್ಲೀಷ್ ಲೇಖಕನು "baptize" ಎಂಬ ಪದವನ್ನು ಬಾಪ್ತಿಸ್ಮ ಹೊಂದಿದ್ದನ್ನು ಮುಳುಗೇಳಿಸುವುದು, ದುಮುಕುವುದು, ಮುಣಿಗಿಸುವುದು, ಎಂಬರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ ಉಪಯೋಗಿಸಿರುವದಿಲ್ಲ. ಬಾಪ್ತಿಸ್ಮ ಮಾಡಿಸಲ್ಪಡುವುದು ಉಪಯೊಗಿಸಿದ್ದರಲ್ಲಿ ಇಲ್ಲವೇ ಉಪಯೋಗಿಸಿದ್ದರೊಂದಿಗೆ ಸಂಪೂರ್ಣವಾಗಿ ಒಳಗೊಂಡಿರುತ್ತದೆ. ಇಂಗ್ಲೀಷ್ ಬರಹಗಳಲ್ಲಿ "baptized in debt," "baptized with work," "baptized with questions," "baptized in suffering," ಎಂಬಿತ್ಯಾದಿ ಮಾತುಗಳು ಉಯೋಗಿಸಲ್ಪಡುವುದು ಸಾಮಾನ್ಯವಾಗಿದೆ. ಈ ಪ್ರತಿಯೊಂದು ವ್ಯಕ್ತಪಡಿಸುವಿಕೆಗಳಲ್ಲಿ ಸೂಚಿಸಲ್ಪಟ್ಟ ಹೆಚ್ಚಾದ ವಸ್ತುವು ಉಪಯೋಗಿಸಲ್ಪಡುತ್ತದೆ: ಬಾಪ್ತಿಸ್ಮ ಹೊಂದುವವನು, ಅದರಲ್ಲಿ ಇಲ್ಲವೇ ಅದರಿಂದ, ಮುಣಿಗಿಸಲ್ಪಡುವವನು ಇಲ್ಲವೇ ಮುಳುಗಿಸಲ್ಪಡುವವನು. ಯಾರೂ ಅದರ ಬಗ್ಗೆ ಬೇರೆ ವಿಚಾರವನ್ನು ಪಡೆದುಕೊಳ್ಳಲಾರರು.

ಈ ಚರ್ಚೆಯಲ್ಲಿ ಸಹಾಯ ಮಾಡಲು ಇಂಗ್ಲೀಷ್‌ನಲ್ಲಿ ಈ ಪದದ ಅರ್ಥ ಒಂದು ಉದಾಹರಣೆಯನ್ನು ದೇವರು ನನ್ನ ಕೈಯಲ್ಲಿಟ್ಟಿದ್ದಾನೆಂದು ತೋರುತ್ತದೆ. ಅದು Pictorial Reviewದ ಒಂದು ಸಂಚಿಕೆಯಲ್ಲಿ ಒಂದು ಉತ್ತಮವಾಗಿ ಬರೆಯಲ್ಪಟ್ಟ ಉಪಯೋಗಿಸಲ್ಪಟ್ಟ ಲೇಖನವು "The Love Letters of a Confederate General"ದ ಕೊನೆಯ ಭಾಗವಾಗಿತ್ತು. ಈ ಪ್ರಸಿದ್ಧ ಪತ್ರಗಳ ಕೊನೆಯಲ್ಲಿ ಲೇಖಕನಾದ ಜನರಲ್ ಜಾರ್ಜ್ ಈ ಪಿಕ್ಕೆಟ್ಟ್ ಹೀಗೆ ಬರೆದನು,

> It is finished - the suffering, the horrors, the anguish of these last hours of struggle of these men, baptized in battle at Bull Run, in the lines at Yorktown, at Williamsburg where they, with the Alabama Brigade of Wilcox, withstood advance of the whole of McClellan's army, driving them back at Seven Pines, Gaines' mill, Frazier's farm, Second Manassas, Boonsboro, Sharpsburg, Gettysburg, in the

> engagement in front of Bermuda Hundred, Fort Harrison, Five Forks and Sailor's Creek. (Emphasis added.)

ಸಾವಿರಾರು ಜನ ವಾಚಕರು ಈ ಲೇಖವನ್ನು ಓದಿದ್ದಾರೆ, ಮತ್ತು ಪ್ರತಿಯೊಬ್ಬ ವಾಚಕನು "baptized in battle" ಎಂಬುದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿರುವನು. ಈ ಸಿವಿಲ್ ವಾರ್ ಸೈನಿಕರು ಯುದ್ಧದಿಂದ ಇಲ್ಲವೇ ಯುದ್ಧದಲ್ಲಿ ಕೂಗ್ಗಿಸಲ್ಪಟ್ಟರು ಎಂದು ಎಲ್ಲರೂ ಅದರ ಅರ್ಥವನ್ನು ತಿಳಿದುಕೊಂಡರು. ಅವರು "ಯುದ್ಧದಲ್ಲಿ ಬಾಪ್ತಿಸ್ಮ ಹೊಂದಿದ" ಈ ಸ್ಥಳಗಳಲ್ಲಿ ಅವರು ಹಗುರವಾದ ಯುದ್ಧಗಳಲ್ಲಿ ತೊಡಗಿದ್ದರೆಂದು ಒಬ್ಬ ವಾಚಕನಿಗಾದರೂ ಎಂದೂ ಸೂಚಿಸಲ್ಪಟ್ಟಿರುವದಿಲ್ಲ. ನಮ್ಮ ಕರ್ತನ ಅಪ್ಪಣೆಗಳ ಬಗ್ಗೆ ಅವನ ಧಾರ್ಮಿಕ ನಂಬಿಕೆಗಳು ಏನೇ ಇದ್ದರೂ, ಪ್ರತಿಯೊಬ್ಬ ವಾಚಕನು ನಾನು ಮಾತಾಡುವಂಥ ರೀತಿಯಲ್ಲಿಯೇ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವನು. ಆದುದರಿಂದ, ಇದು ಒಳ್ಳೇ ಗುಣಮಟ್ಟದ ಇಂಗ್ಲೀಷ್ ಗ್ರಂಥಕರ್ತನಿಂದ ಬರೆಯಲ್ಪಟ್ಟರು ಪ್ರತಿಯೊಂದು ವಾಕ್ಯಭಾಗದಲ್ಲಿರುವುದು ಬಹಳಷ್ಟು ವಸ್ತುವು ಒಳಗೊಂಡಿದೆ ಮತ್ತು ಬಾಪ್ತಿಸ್ಮ ಹೊಂದಿದ್ದು ಅವರಿಂದ ಮುಣುಗಿಸಲ್ಪಟ್ಟಿದೆ ಎಂದು ಗ್ರಂಥಕರ್ತನು ಯಾವಾಗಲೂ ಅರ್ಥಕೊಡುತ್ತಾನೆ. ಎಲ್ಲಾ ಇಂಗ್ಲೀಷ ವಾಚಕರು ನಮ್ಮ ಕರ್ತನ ಬೋಧನೆಯಲ್ಲಿ ಬಿಟ್ಟು, ಅದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುತ್ತಾರೆ. ಆತನ ಪರಿಶುದ್ಧ ಬೋಧನೆಗಳಿಗೆ ನಾವು ಬರುವಾಗ, ನಾವು ಸಭಾಪಂಗಡತ್ವದ ಕನ್ನಡಕವನ್ನು ಧರಿಸುವೆವು ಮತ್ತು "baptize" ಎಂಬ ಪದದಲ್ಲಿ ಇತರ ಯಾವುದೇ ಇಂಗ್ಲೀಷ್ ಬರಹದಲ್ಲಿ ಇಲ್ಲದನ್ನ ನಾವು ನೋಡುವೆವು. ಅದಕ್ಕೆ ಸಂಪೂರ್ಣವಾಗಿ ಒಂದು ಹೊಸ ಅರ್ಥವನ್ನು ಎಲ್ಲಿಯೂ ಉಪಯೋಗಿಸಿರದ ಅರ್ಥವನ್ನು ಕೊಡುವೆವು. ಇದು ಸರಿಯಾಗಿದೆಯೋ? ಇಂಗ್ಲೀಷ್ ಮಾತಾಡುವ ಜಗತ್ತನ್ನು ದೇವರು ಕ್ಷಮಿಸುವನೋ?

---

ಟಿಪ್ಪಣಿ

[1]"ಸಭಾಪಂಗಡತ್ವವಲ್ಲದ ಕ್ರೈಸ್ತತ್ವ - ಬಾಪ್ತಿಸ್ಮದ ನಂತರ ರಕ್ಷಿಸಲ್ಪಡುವುದು" ಮತ್ತು "ಸಭಾಪಂಗಡತ್ವವಲ್ಲದ ಕ್ರೈಸ್ತತ್ವ - ಪಾಪಗಳ ಪರಿಹಾರ" ಎಂಬ ಈ ಪ್ರಕಟನೆಯಲ್ಲಿಯ ಪಾಠಗಳನ್ನು ಪುನರಾವರ್ತಿಸಿರಿ. ವಿಧೇಯ ವಿಶ್ವಾಸಿಯು ಬಾಪ್ತಿಸ್ಮದ ನಂತರ ಮಾತ್ರವೇ ಕ್ಷಮಿಸಲ್ಪಡುವನು ಎಂಬುದನ್ನು ತೋರಿಸಲು, ಪಶ್ಚಾತ್ತಾಪ ಪಟ್ಟು ವಿಶ್ವಾಸಿಗಳು ತಮ್ಮ ಪಾಪಗಳ ಪರಿಹಾರಕ್ಕಾಗಿ "unto" (eis) ಬಾಪ್ತಿಸ್ಮ ಮಾಡಿಸಿಕೊಳ್ಳಬೇಕೆಂದು ಪೇತ್ರನು ಹೇಳಿದನು.

© 2009 Truth for Today